


ಗುಂಡ: ಸಾರ್ ಇದೀಗ ನಾನು ಡಿಗ್ರಿಯನ್ನು ಮುಗಿಸಿದ್ದೇನೆ. ಮುಂದೆ ಏನು ಓದಲಿ?

ಪ್ರೊಫೆಸರ್: ಪತ್ರಿಕೆಗಳ ಜಾಹೀರಾತಿನಲ್ಲಿ 'ಬೇಕಾಗಿದ್ದಾರೆ' ಕಾಲಂ ಓದು.

★★★

ಗುಂಡ: ನೆನ್ನೆ ನಿಮ್ಮ ಅಂಗಡಿಯಲ್ಲಿ ಒಂದು ಕೆ.ಜಿ. ಸಕ್ಕರೆ ತೆಗೆದುಕೊಂಡು ಹೋದೆ. ಮನೆಗೆ ಹೋಗಿ ನೋಡಿದರೆ 100 ಗ್ರಾಂ. ಕಡಿಮೆ ಇತ್ತು.

ಅಂಗಡಿಯಾತ: ನಡೆದಾಡಿದರೆ 'ಶುಗರ್' ಕಡಿಮೆಯಾಗುತ್ತದೆ ಎಂದು ಡಾಕ್ಟರ್ ಹೇಳಿರುವುದನ್ನು ನೀವು ಕೇಳಿಲ್ಲವೇ?

★★★

ಕಾಂಪೌಂಡರ್: ಸಾರ್ ಸಾಯುವ ಸ್ಥಿತಿಯಲ್ಲಿದ್ದ ಆ ರೋಗಿ ಒಮ್ಮೆಲೇ ಗುಣಮುಖನಾಗಿ ಬಿಟ್ಟನಲ್ಲ. ಹೇಗಾದ?

ವೈದ್ಯ: ಅವನಿಗೆ ಎಲ್ಲಾ ತರಹದ ಮಾತ್ರೆ ಕೊಟ್ಟಿದ್ದೆ. ಅವನು ಯಾವ ಮಾತ್ರೆಯಿಂದ ಗುಣಮುಖನಾದ ಎಂದು ನನಗೂ ಗೊತ್ತಿಲ್ಲ.

★★★

ಗೆಳೆಯ: ನೀನು ತೆಗೆದುಕೊಂಡ 10 ಸಾವಿರ ಸಾಲವನ್ನು ಮರತೇ ಬಿಟ್ಟಂತಿದೆ.

ಗುಂಡ: ಮರೆಯಲು ಹೇಗೆ ಸಾಧ್ಯ? ನೀನು ಆಗಾಗ ನೆನಪಿಸುತ್ತಲೇ ಇರುತ್ತೀಯಲ್ಲ.

★★★

ಗೆಳೆಯ: ನನಗೆ ಅತಿರೂಪವತಿಯಾದ, ಗುಣವತಿಯಾದ, ವಿಧೇಯಳಾಗಿರುವ ಹುಡುಗಿ ಇದ್ದರೆ ತಿಳಿಸು. ಮದುವೆಯಾಗುತ್ತೇನೆ.

ಗುಂಡ: ಅದೇನೋ ಸರಿ! ಆದರೆ ಮೂವರನ್ನು ಹೇಗೆ ಸುಧಾರಿಸುತ್ತೀಯಾ?

★★★

ರಾಯರು: ನೀನು ಯಾವ ಡಿಗ್ರಿ ಮಾಡಬೇಕೆಂದು ಇಷ್ಟಪಟ್ಟಿದ್ದೆ?

ಗುಂಡ: ಎಂಜಿನಿಯರಿಂಗ್! ಆದರೆ ಸಾಧ್ಯವಾಗಲಿಲ್ಲ.

ರಾಯರು: ಯಾಕೆ ಆಗಲಿಲ್ಲ?

ಗುಂಡ: ಏನು ಮಾಡಲಿ? ಎಸ್ಸೆಸ್ಸೆಲ್ಸಿ ಅಡ್ಡ ಬಂದು ಬಿಡ್ತು

★★★

ಗುಂಡ: ನಿನ್ನೆ ರಾತ್ರಿ ನಾನು 10 ಇಡ್ಲಿ ತಿಂದ ಹಾಗೆ ಕನಸು ಬಿತ್ತು. ಚಿಂತೆಯಿಂದ ತಲೆಕೆಟ್ಟು ಹೋಗಿದೆ.

ಗೆಳೆಯ: ಅಯ್ಯೋ ಅದಕ್ಯಾಕೆ ಅಷ್ಟು ಚಿಂತೆ ಮಾಡಬೇಕಿತ್ತು?

ಗುಂಡ: ಏಕೆಂದರೆ ಬೆಳಿಗ್ಗೆ ಎದ್ದು ನೋಡಿದಾಗ ನನ್ನ ತಲೆದಿಂಬೇ ಇರಲಿಲ್ಲ.

★★★

ಭಿಕ್ಷುಕ: ನಾನು ಕಣ್ಣಿಲ್ಲದ ಕುರುಡ ತಾಯಿ! ದಾನ ಮಾಡಿ.

ಗುಂಡ: ಮುಂದೆ ಹೋಗಪ್ಪ! ನೇತ್ರದಾನಿಗಳು ಈ ಮನೆಯಲ್ಲಿ ಯಾರೂ ಇಲ್ಲ.

■ **ಎಂ.ಕೆ. ಮಂಜುನಾಥ್**


ಕೈಲಾಸ ಜೀವನ

ಶಾಂತ, ತಂಪು, ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್




। ಹಿಮ್ಮಡಿಗಳ ಬಿರಿತ । ಮೊಡವೆಗಳು ।
। ಕೈ ಕಾಲು ಮತ್ತು ಕಣ್ಣುಗಳ ಉರಿತ ।
। ಮೂಲವ್ಯಾಧಿ । ಕೊಯ್ತ । ಉರಿತ ।
ಮೊದಲಾದವಕ್ಕೆ ಗುಣಕಾರಕ



Available in all medical stores
12g, 20g Tube, 30g, 60g, 120g, 230g Bottle

I Manufacturer: **ASUM**, Pune. **020-24486865** I Customer Care: Rahul: **94816 00865**, Datta: **0 91300 26068** I **asumkj@gmail.com** I **www.asum.com** I

**Distributor: Yellapur:** Shri Rama Stores: **08419-262180** I **Bangalore:** Mohan Pharma: **080-22874575** I **Mangalore:** Vivek Traders: **0824-2496963** I **Bellary:** Kalwa Agencies: **9379999406** I **Belgaum:** Satyam Ayurvedic & Gen. Distributor: **0831-4206784**

anunaad.com